ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಂಡರಗಿ

| | | |
|---|---|---|
| | ದರಕಾಸ್ತು ಸಂಖ್ಯೆ56/2019 | |
| | ಆರ್.ಡಬ್ಲೂಃ | 1 |
| | ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 12.01.2026 | |
| ಸಾಕ್ಷಿದಾರರ ಹೆಸರುಃ | ಅಂದಾನಪ್ಪ ನವಲಗುಂದ | |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಎಸ್.ಎ.ಕೆ. ವಕೀಲರಿಂದಃ**

1. ನಾನು ಎಮ್.ಎ., ಎಮ್.ಫಿಲ್., ಎಲ್.ಎಲ್.ಬಿ. ವ್ಯಾಸಂಗ ಮಾಡಿದ್ದೇನೆ. ನಾನು ತೀರ್ಪುಖಣಿದಾರ ಸಂಸ್ಥೆಯಲ್ಲಿ ಜನರಲ್ ಸೆಕ್ರೆಟರಿ ಆಗುವ ಪೂರ್ವದಲ್ಲಿ ಕೆ.ಆರ್.ಬೆಲ್ಲದ ಪದವಿ ಕಾಲೇಜಿನಲ್ಲಿ ದೈಹಿಕ ಶಿಕ್ಷಕ ಅಂತಾ ಕೆಲಸ ಮಾಡಿದ್ದೆ ಎಂದರೆ ಸರಿ. ಸದರಿ ಕೆಲಸ ಮಾಡುವ ಸಂದರ್ಭದಲ್ಲಿ ನಾನು ತೀರ್ಪುಖಣಿದಾರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ. ನಾನು 2014 ರಲ್ಲಿ ಕೆ.ಆರ್.ಬೆಲ್ಲದ ಪದವಿ ಕಾಲೇಜಿನಿಂದ ನಿವೃತ್ತಿ ಹೊಂದಿದ್ದೇನೆ. ನಾನು ಈಗ 3 ವರ್ಷದಿಂದ ತೀರ್ಪುಖಣಿದಾರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ತೆರೆದ ನ್ಯಾಯಾಲಯದಲ್ಲಿ ಕುಳಿತ ಎಸ್ ಎನ್ ಡೊಣ್ಣಿ ಇವರು ನಮ್ಮ ಸಂಸ್ಥೆಯಲ್ಲಿ ಗುಮಾಸ್ತ ಕೆಲಸ ಮಾಡುತ್ತಾರೆ. ಸದರಿಯವರು ನಾನು ನ್ಯಾಯಾಲಯಕ್ಕೆ ಬರದೇ ಇರುವ ಸಂದರ್ಭದಲ್ಲಿ ನಮ್ಮ ಸಂಸ್ಥೆಯನ್ನು ಪ್ರತಿನಿಧಿಸಲು ಬರುತ್ತಾರೆ ಎಂದರೆ ಸರಿ ಅಲ್ಲ. ಸದರಿಯವರ ವಿದ್ಯಾಭ್ಯಾಸದ ಕುರಿತು ನನಗೆ ಮಾಹಿತಿ ಇಲ್ಲ. ನನಗೆ ಅಸಲು ದಾವೆಯ ಸಂಪೂರ್ಣ ಮಾಹಿತಿ ಇದೆ.

2. ನ್ಯಾಯಾಲಯದ ಆಯುಕ್ತರು ನ್ಯಾಯಾಲಯದ ಆದೇಶದಂತೆ ದಾವಾ ಆಸ್ತಿಯನ್ನು ಅಳತೆ ಮಾಡುವ ಕಾಲಕ್ಕೆ ನಾನು ಹಾಜರಿದ್ದೆ. ನಾನು ಸಂಪೂರ್ಣ ವರದಿ ನೋಡಿಲ್ಲ. ಆದರೆ, ನಕ್ಷೆಯನ್ನು ನೋಡಿರುತ್ತೇನೆ. ಸಿ.ಡಬ್ಲ್ಯೂ-1 ರವರು ಸಾಕ್ಷಿ ನುಡಿದ ಕುರಿತು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ 17 ನೇ ಖಂಡಿಕೆಯಲ್ಲಿ ರಿ ಸ ನಂ.16/3 ವಿಸ್ತೀರ್ಣ 4 ಎಕರೆ 00 ಗುಂಟಾ ಅಂತಾ ನಮೂದಿಸಿದ್ದು , ಆ ಕುರಿತು ನ್ಯಾಯಾಲಯಕ್ಕೆ ಯಾವುದಾದರೂ ದಾಖಲೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಅದು ನಜರ್ ಚೂಕಿನಿಂದ ತಪ್ಪಾಗಿದೆ ಅಂತಾ ನುಡಿಯುತ್ತಾರೆ. ನಾನು ಇದೇ ನ್ಯಾಯಾಲಯದಲ್ಲಿ ಸುಮಾರು 3-4 ತಿಂಗಳು ವಕೀಲ ವೃತ್ತಿ ಮಾಡಿದ್ದೇನೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ 7 ನೇ ಪುಟದಲ್ಲಿ ಅಸಲು ದಾವಾ ಸಂಖ್ಯೆ 75/2016 ಕಾನೂನು ಬಾಹಿರ ಇದ್ದು , ಅದು ನಮ್ಮ ಮೇಲೆ ಬಂಧನಕಾರಿ ಇಲ್ಲ ಅಂತಾ ಯಾವ ಕಾರಣಕ್ಕೆ ಬರೆದಿದ್ದೀರಿ ಎಂದರೆ ಸಾಕ್ಷಿಯು ಅದರಲ್ಲಿ ಸಲ್ಲಿಸಿದ ವಾದ ಪತ್ರ ಸರಿಯಾಗಿಲ್ಲ ಆದ್ದರಿಂದ ಅಂತಾ ನುಡಿಯುತ್ತಾರೆ.

3. ಸದರಿ ಅಸಲು ದಾವಾ ಸಂಖ್ಯೆ 75/2016 ರ ಪ್ರತಿವಾದ ಪತ್ರವನ್ನು ನಾನು ನೋಡಿದ್ದೇನೆ. ವಾದ-ಪ್ರತಿವಾದ ಪತ್ರ, ಕಡತದಲ್ಲಿರುವ ದಾಖಲೆ , ಸಾಕ್ಷಿ ವಿಚಾರಣೆ ಪರಿಗಣಿಸಿ, ನ್ಯಾಯಾಲಯ ಅಂತಿಮ ತೀರ್ಪಿನಲ್ಲಿ ವಾದಿ ಪರವಾಗಿ ಡಿಕ್ರಿ ಮಾಡಿ, ದಾವಾ ಆಸ್ತಿಯನ್ನು ಬಿಟ್ಟು ಕೊಡಬೇಕೆಂದು ತಿಳಿಸಿದ್ದರು ಎಂದರೆ ಸರಿ. ಸದರಿ ದಾವೆಯ ವಾದ ಪತ್ರದಲ್ಲಿ ನಮೂದಿಸಿದ 12 ಗುಂಟೆ ದಾವಾ ಆಸ್ತಿಯ ಚೆಕ್ ಬಂದಿಯನ್ನು ನಾನು ನೋಡಿಲ್ಲ.

ಸದರಿ ದಾವೆಯ ಅಂತಿಮ ತೀರ್ಪಿನಲ್ಲಿ ನ್ಯಾಯಾಲಯದ ಆಯೋಜಕ ಸಲ್ಲಿಸಿದ ವರದಿಯನ್ನು ಸದರಿ ತೀರ್ಪಿನ ಭಾಗವೆಂದು ಪರಿಗಣಿಸಲಾಗುವುದು ಎಂದರೆ ನನಗೆ ಗೊತ್ತಿಲ್ಲ.

4. ನನ್ನ ಮುಖ್ಯ ವಿಚಾರಣೆಯ 19 ನೇ ಖಂಡಿಕೆಯಲ್ಲಿ ನಮೂದಿಸಿದ ಅಂಶಗಳು ಸರಿ ಇವೆ. ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಇವರು ನಾವು ಸಲ್ಲಿಸಿದ ಅಪೀಲ್ ಆರ್ ಎಸ್ ಎ ಸಂಖ್ಯೆ 100074/2022 ರಲ್ಲಿ ನೀವು ಸದರಿ ಖಂಡಿಕೆಯಲ್ಲಿ ಬರೆದಂತೆ ಆದೇಶ ಮಾಡಿಲ್ಲ ಎಂದರೆ ಸರಿ ಅಲ್ಲ.

ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ

ಮುಂಡರಗಿ.